ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಸರ್ವಜ್ಞನಗರ

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ಸರ್ವಜ್ಞನಗರದ ಒಳನೋಟ

1. ಪ್ರದೇಶ: 16.8 sq. km

2. ಜನಸಂಖ್ಯೆ : 375445

3. ವಾರ್ಡ್ : ನಾಗವಾರ, ಎಚ್ ಬಿ ಆರ್ ಲೇಔಟ್ ಬಾಣಸವಾಡಿ, ಕಮ್ಮನಹಳ್ಳಿ, ಕಚಕನಹಳ್ಳಿ, ಕಾಡುಗೊಂಡನಹಳ್ಳಿ

4. ಒಟ್ಟು ಗೃಹಗಳು : 87729

5. ರಸ್ತೆ ವಿಸ್ತೀರ್ಣ : 496 km

6)ಕೆರೆಗಳು : ಕಚಕನಹಳ್ಳಿ, ಚೆನ್ನಸಂದ್ರ-2 ಲಿಂಗರಾಜಪುರ, ಬ್ಯಾಟಗುಂಟೆಪಾಳ್ಯ

7)ಆರಕ್ಷಕ ಠಾಣೆ : ಹೆಣ್ಣೂರು ಬಾಣಸವಾಡಿ10. ಬಸ್ ನಿಲ್ದಾಣಗಳು : 136

8. ಅಗ್ನಿಶಾಮಕ ಕೇಂದ್ರ :1

9. ಸರ್ಕಾರಿ ಶಾಲೆಗಳು :30

11. ಆಟದ ಮೈದಾನ :12

12. ಪಾರ್ಕ್‌ಗಳು: 49

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ಧಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ಸರ್ವಜ್ಞನಗರ

## ಪ್ರಮುಖ 5 ಬೇಡಿಕೆಗಳು

### ತ್ಯಾಜ್ಯ ನಿರ್ವಹಣೆ

1. ತ್ಯಾಜ್ಯ ವಿಂಗಡಣೆ, ಪ್ಲಾಸ್ಟಿಕ್ ನಿಷೇಧ ಮತ್ತು ಇತರೆ ನಿಯಮಗಳು ಮತ್ತು ನಿಬಂಧನೆಗಳನ್ನು ಜಾರಿಗೊಳಿಸಲು ತ್ಯಾಜ್ಯ ನಿರ್ವಹಣೆಗೆ ಕಾರ್ಯಯೋಜನೆ

2. ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

3. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ವರ್ಗಾಯಿಸಲು ಅನುಕೂಲವಾಗುವಂತೆ ವೈಜ್ಞಾನಿಕ ವರ್ಗ ಸ್ಥಳಗಳ ಸ್ಥಾಪನೆ

4. ಸರ್ವಜ್ಞನಗರÀದಿಂದ ಸಂಗ್ರಹಿಸಿದಂತಹ ಹಸಿ ಮತ್ತು ಎಲೆ ಕಸವÀನ್ನು ಸರ್ವಜ್ಞನಗರÀದಲ್ಲೇ ಸಂಸ್ಕರಿಸಲು ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯಾಗಬೇಕು. ಈ ಪ್ರಕ್ರಿಯೆಯು ನಾಗರೀಕರನ್ನು ಒಳಗೊಂಡಿರಬೇಕು ಮತ್ತು ಈ ಕುರಿತು ಜನರಿಗೆ ಮಾಹಿತಿಯನ್ನು ನೀಡಬೇಕು.

5. ಗಲೀಜು ಪ್ರದೇಶಗಳನ್ನು ನಿವಾರಿಸಲು ಮತ್ತು ಬೃಹತ್ ಪ್ರಮಾಣದ ತ್ಯಾಜ್ಯವನ್ನು ವಿಲೇವಾರಿ ಮಾಡಲು ಅನುಕೂಲವಾಗುವಂತೆ ನಾಗರೀಕರಿಗಾಗಿ ಸಹಾಯವಾಣಿಯೊಂದನ್ನು ಆರಂಭಿಸಬೇಕು.

6. ದೇವಸ್ಥಾನಗಳು, ಶಿಕ್ಷಣ ಸಂಸ್ಥೆಗಳು, ರೆಸ್ಟೋರೆಂಟ್‌ಗಳು, ಆಸ್ಪತ್ರೆಗಳು ಮತ್ತು ಇತರೆ ಬೃಹತ್ ಪ್ರಮಾಣದಲ್ಲಿ ಕಸ ಉತ್ಪಾದಿಸುವವರನ್ನು ಶೂನ್ಯ ಕಸದ ಮೂಲವಾಗುವುದಕ್ಕೆ ಉತ್ತೇಜನ ಮತ್ತು ಬೆಂಬಲಿಸಬೇಕು.

7. ಕ್ಷೇತ್ರದಾದ್ಯಂತ ಕಣ್ಣಿಗೆ ಗೋಚರಿಸುವಂತಹ ಸ್ವಚ್ಛತೆಯನ್ನು ಆದ್ಯತೆಯಾಗಿಸಿಕೊಳ್ಳಬೇಕು

### ಸಂಚಾರ ಮತ್ತು ಸಾರಿಗೆ

1. ರಸ್ತೆ ಕಾಮಗಾರಿ ಕೈಗೊಂಡ ವಿವರಗಳನ್ನು ಪ್ರಸರಿಸಬೇಕು. ಗುತ್ತಿಗೆದಾರರ ವಿವರ, ಕಾಮಗಾರಿಯ ವೆಚ್ಚ ಮತ್ತು ಇತರೆ ಮಾಹಿತಿಗಳನ್ನೊಳಗೊಂಡ ರಸ್ತೆ ಇತಿಹಾಸವನ್ನು ಎಲ್ಲರಿಗೂ ದೊರೆಯುವಂತೆ ಮಾಡಬೇಕು.

2. ವಿವಿಧ ಸಂಸ್ಥೆಗಳಿಂದ ರಸ್ತೆಗಳು ಮತ್ತೆ ಮತ್ತೆ ಅಗೆಯಲ್ಪಡುತ್ತದೆ. ಈ ಸಂಸ್ಥೆಗಳ ನಡುವೆ ಹೊಂದಾಣಿಕೆ ಮೂಡಿಸುವುದು ಮತ್ತು ಅಗೆದ ರಸ್ತೆಗಳನ್ನು ತಕ್ಷಣವೇ ಸರಿಪಡಿಸಬೇಕಾದ ಅವಶ್ಯಕತೆ ಇದೆ.

3. ಒತ್ತುವರಿ ಮುಕ್ತ ಪಾದಚಾರಿ ಸ್ನೇಹಿ ಮತ್ತು ಪ್ರವೇಶಿಸಬಹುದಾದಂತಹ ಪಾದಚಾರಿ ಮಾರ್ಗ

4. ಲಭ್ಯವಾಗುವಂತಹ ಸಾರ್ವಜನಿಕ ಸಾರಿಗೆ ಮತ್ತು ಮೆಟ್ರೋ ಸ್ಟೇಷನ್‌ನಿಂದ ಕೊನೆಯ ಹಂತದವರೆಗೆ ಸಂಪರ್ಕ ಅವಕಾಶಗಳು

5. ಹೆಚ್ಚಿನ ಟ್ರಾಫಿಕ್ ಹೊಂದಿರುವ ಜಂಕ್ಷನ್‌ಗಳಾದ ಬಾಣಸವಾಡಿ ಮೇಲುರಸ್ತೆ, ಹೊರಮಾವು ಸಿಗ್ನಲ್, ಲಿಂಗರಾಜಪುರ ಮೇಲುರಸ್ತೆ, ಹೆಬ್ಬಾಳ ಮತ್ತು ನಾಗವಾರ ಮೇಲುರಸ್ತೆಗಳಲ್ಲಿ ಟ್ರಾಫಿಕ್ ಒತ್ತಡವನ್ನು ನಿವಾರಿಸಬೇಕಿದೆ.

6. ಅಂಚೆ ಕಚೇರಿ, ಸಮುದಾಯ ಭವನ ಮತ್ತು ಬಹು ಹಂತದ ಪಾರ್ಕಿಂಗ್‌ನಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಿದೆ.

7. ಪೊಲೀಸರು ಟ್ರಾಫಿಕ್ ನಿರ್ವಹಣೆಗೆ ಹಾಗೂ ವಿಶೇಷವಾಗಿ ರಸ್ತೆಪಥ ನಿರ್ವಹಣೆಗೆ ಹೆಚ್ಚಿನ ಒತ್ತು ನೀಡಬೇಕಿದೆ.

## ನೀರು

1. ಎಚ್‌ಆರ್‌ಬಿಆರ್ ಲೇಔಟ್‌ನಂತಹ ಪ್ರದೇಶಗಳಲ್ಲಿ ನೀರಿನ ಸರಬರಾಜು ಸಮರ್ಪಕವಾಗಿಲ್ಲ. ಪ್ರತಿನಿತ್ಯ ಪ್ರತಿ ವ್ಯಕ್ತಿಗೆ ಕನಿಷ್ಠ 90ಲೀಟರ್‌ಗೆ ಸಮವಾಗುವಷ್ಟು ನೀರನ್ನು ಎಲ್ಲ ನಿವಾಸಿಗಳಿಗೂ ಪೂರೈಸಬೇಕು

2. ನೀರು ಪೂರೈಕೆ ನಷ್ಟದ ಪ್ರಮಾಣವನ್ನು ಪ್ರಸ್ತುತ ಇರುವ ಶೇ.45 ರಿಂದ ಶೇ. 20ಕ್ಕೆ ಇಳಿಸಲು ಕ್ರಮ ಕೈಗೊಳ್ಳಬೇಕು

3. 8ನೇ ಮುಖ್ಯರಸ್ತೆ, ಎಚ್‌ಆರ್‌ಬಿಆರ್ ಲೇಔಟ್ ನಂತಹ ಕೆಲವು ಪ್ರದೇಶಗಳಲ್ಲಿ ಮತ್ತೆ ಮತ್ತೆ ಉಂಟಾಗುವ ಪ್ರವಾಹವನ್ನು ತಡೆಗಟ್ಟುವುದು

4. ಮಳೆ ನೀರು ಕಾಲುವೆ ಮತ್ತು ಮೋರಿಗಳಲ್ಲಿ ಕಾಲಕಾಲಕ್ಕೆ ಹೂಳು ಎತ್ತುವುದು ಹಾಗೂ ನಿರ್ವಹಿಸುವುದು

5. ಖಾಸಗಿ ನೀರಿನ ಟ್ಯಾಂಕರ್‌ಗಳ ನಿಯಂತ್ರಣ

6. ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಅಭಿಯಾನವನ್ನು ನಡೆಸಬೇಕು ಮತ್ತು ಮಳೆನೀರು ಕೊಯ್ಲು ತಜ್ಞರು ಮತ್ತು ನೀರು ಉಳಿಸುವ ವಾಯುಪೂರಕ (ಏರೇಟರ್)ದÀಂತಹ ಸಾಧನಗಳ ಮಾಹಿತಿ ಸುಲಭವಾಗಿ ದೊರೆಯಲು ಕಿಯೋಸ್ಕ್‌ಗಳು ಲಭ್ಯವಾಗುವಂತೆ ಮಾಡಬೇಕು

7. ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಸಾಧನವನ್ನು ಅಳವಡಿಸಬೇಕು.

8. ಶುದ್ಧೀಕರಿಸಿದ ನೀರಿನ ಬಳಕೆಯನ್ನು ಉತ್ತೇಜಿಸಲು ಕೊಳಚೆ ನೀರು ಸಂಸÀ್ಕರಣಾ ಘಟಕ ನಿರ್ಮಾಣ

## ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ

1. ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

2. ಆಪ್ತಸಮಾಲೋಚನಾ ಕೇಂದ್ರ

3. ವಿವಿಧ ರೀತಿಯ ಆದಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಸುರಕ್ಷತೆ ಮತ್ತು ಸಬಲೀಕರಣ ಸಂಪನ್ಮೂಲದ ಕುರಿತು ಜಾಗೃತಿ ಮೂಡಿಸುವುದು

4. ಪೊಲೀಸ್ ಚೌಕಿ ಮತ್ತು ಉತ್ತಮ ನೆರೆಹೊರೆ ನಿಗಾವಣೆ ಕಾರ್ಯಕ್ರಮಗಳು

## ಪರಿಸರ ಮತ್ತು ಆರೋಗ್ಯ

1. ಆರೋಗ್ಯ ಸಮಸ್ಯೆಗಳಿಗೆ ಖಾಲಿ ನಿವೇಶನಗಳೇ ಮೂಲಕಾರಣ. ಬಿಬಿಎಂಪಿ ನಿಯಮಿತವಾಗಿ ಈ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವುದು ಅಗತ್ಯ. ಖಾಲಿ ನಿವೇಶನಗಳಲ್ಲಿ ಕಸ ಎಸೆಯುವಿಕೆ ಮತ್ತು ಕಳೆ ಬೆಳೆಯುವುದನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಬೇಕು.

2. ಹಸಿರು ಹೊದಿಕೆಯ ನಿಗಾವಣೆ ಮತ್ತು ನಿರ್ವಹಣೆ (ವೈಜ್ಞಾನಿಕವಾಗಿ ಮರ ಕತ್ತರಿಸುವಿಕೆ)

3. ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳನ್ನು ಆದ್ಯತೆಯಾಗಿಸುವುದು

4. ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಮತ್ತು ಕೈಗೆಟಕುವ ದರದಲ್ಲಿ ನೀಡಲು 24/7 ತುರ್ತು ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು, ರೋಗಪತ್ತೆ ಕೇಂದ್ರಗಳನ್ನು ಸ್ಥಾಪಿಸಬೇಕು.

5. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪಾರ್ಕ್‌ಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸುವಿಕೆ

6. ವಾಯು ಗುಣಮಟ್ಟ ಮತ್ತು ಗದ್ದಲ ಪ್ರಮಾಣ ನಿಗಾವಣೆಗೆ ಸೂಚಕಗಳನ್ನು ಅಳವಡಿಸಬೇಕು.